**ಓ ಎಸ್ 99/2023 ಪಿಡಬ್ಲ್ಯೂ3**

**ಸಾಕ್ಷಿಯನ್ನು ದಿಃ 13.11.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎ ಜಿ ಪಿ ರವರಿಂದಃ**

ಸ್ವಾಮಿಗೌಡರು ನನಗೆ ಪರಿಚಯ. ನಮ್ಮಿಬ್ಬರದು ಅಕ್ಕಪಕ್ಕದ ಊರುಗಳಾಗಿರುವ ಕಾರಣ ನಮ್ಮಿಬ್ಬರಿಗೂ ಪರಿಚಯ ಇದೆ. ವಾದಿಯು ಉಳುಮೆ ಮಾಡುತ್ತಿರುವ ಜಮೀನಿನ ಸರ್ವೆ ನಂ. 79 ಆಗಿದೆ. ಆ ಸಂಬಂಧ ದಾಖಲಾತಿಗಳನ್ನು ಅಂದರೆ ಮಂಜೂರಾತಿ ಮತ್ತು ಕೈ ಬರಹದ ಆರ್ ಟಿ ಸಿ ನೋಡಿದ್ದೇನೆ. ಕಂಪ್ಯೂಟರ್ ಆರ್ ಟಿ ಸಿ ಯನ್ನು ನೋಡಿಲ್ಲ. ವಾದಿಯು ಉಳುಮೆ ಮಾಡುತ್ತಿರುವ ಜಮೀನಿನ ವಿಸ್ತೀರ್ಣ 4 ಎಕರೆ ಇದೆ. ಸರ್ವೆ ನಂ. 79 ರಲ್ಲಿನ ಜಮೀನು ಅರಣ್ಯ ಇಲಾಖೆಗೆ ಸೇರಿದೆ ಎಂದರೆ ಸರಿಯಲ್ಲ.ವಾದಿಯು ಉಳುಮೆ ಮಾಡುತ್ತಿರುವ ಜಮೀನಿನ ಪೂರ್ವಕ್ಕೆ ನಿಂಗಮ್ಮರವರಿದ್ದಾರೆ, ಪಶ್ಚಿಮಕ್ಕೆಃ ಮಹಾದೇವಮ್ಮರವರಿದ್ದಾರೆ, ಉತ್ತರಕ್ಕೆಃ ರಸ್ತೆ ದಕ್ಷಿಣಕ್ಕೆಃ ಗೋಮಾಳ. ಪೂರ್ವದ ದಿಕ್ಕಿನಲ್ಲಿರುವ ನಿಂಗಮ್ಮ ಮತ್ತು ವಾದಿ ಚೆನ್ನಾಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಂಗಮ್ಮ ಪಾಂಡವಪುರದವರು. ನಿಂಗಮ್ಮರವರ ಜಮೀನಿಗೆ ನಾನು ವ್ಯವಸಾಯ ಮಾಡಲು ಹೋಗಿಲ್ಲ. ವಾದಿಯು ಯಾವತ್ತೂ ಸಹ ಸರ್ವೆ ನಂ 79 ರಲ್ಲಿ ಉಳುಮೆ ಮಾಡಿಲ್ಲ ಹಾಗೂ ನಾನು ಅವರ ಜಮೀನಿನಲ್ಲಿ ವ್ಯವಸಾಯ ಮಾಡಲು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಉಳುಮೆ ಮಾಡುವಾಗ ಅರಣ್ಯ ಇಲಾಖೆಯವರು ಬಂದು ತಡೆದಿಲ್ಲ. ಹಾಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಬರೆದಿರುವುದು ಸುಳ್ಳು. ಈ ಕೇಸಿನ ವಿದ್ಯಾಮಾನಗಳು ನನಗೆ ಗೊತ್ತಿಲ್ಲದೆ ಇದ್ದರೂ ಸಹ ವಾದಿಯು ನನ್ನನ್ನು ಕರೆದುಕೊಂಡು ಸುಳ್ಳು ಸಾಕ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯು ವ್ಯವಸಾಯ ಮಾಡುತ್ತಿದ್ದಾರೆ ಎಂದು ಹೇಳುತ್ತಿರುವ ಜಮೀನು ಅರಣ್ಯ ಇಲಾಖೆಗೆ ಸೇರಿದ್ದು ಅದರಲ್ಲಿ ಅವರು ಗಿಡ ಮರ ನೆಟ್ಟಿದ್ದಾರೆ ಎಂದರೆ ಸರಿಯಲ್ಲ. ಸುಮಾರು 2 ವರ್ಷಗಳ ಹಿಂದೆ ವಾದಿಯ ಜಮೀನಿನಲ್ಲಿ ಹುರುಳಿ ಚೆಲ್ಲಲು ಹೋಗಿದ್ದೆ. ನನಗೆ

ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ.  ವಾದಿಗೆ ಅನುಕೂಲ ಮಾಡಲು ಸಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ  ಸ ಒ**

**(ಬಾಬು ಎನ್)**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**